ಲೋಕೋಪಯೋಗಿ ಇಲಾಖೆ ಉಪವಿಭಾಗಗಳು

1. ಸಹಾಯಕ ಕಾರ್ಯ ನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ಉಪವಿಭಾಗ ಗುಲ್ಬರ್ಗಾ
2. ಸಹಾಯಕ ಕಾರ್ಯ ನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ಉಪವಿಭಾಗ ಅಳಂದ
3. ಸಹಾಯಕ ಕಾರ್ಯ ನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ಉಪವಿಭಾಗ, ಚಿಂಚೋಳಿ
4. ಸಹಾಯಕ ಕಾರ್ಯ ನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ಉಪವಿಭಾಗ ಯಾದಗಿರಿ
5. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ಉಪವಿಭಾಗ, ಸುರಪೂರ

ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಕಾಮಗಾರಿ ಉಪವಿಭಾಗಗಳು

1. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಕಾಮಗಾರಿ ಉಪವಿಭಾಗ, ಗುಲ್ಬರ್ಗಾ.
2. ಸಹಾಯಕ ಕಾರ್ಯ ನಿರ್ವಾಹಕ ಇಂಜಿನೀಯರ್, ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಕಾಮಗಾರಿ ಉಪವಿಭಾಗ, ಚಿಂಚೋಳಿ.
3. ಸಹಾಯಕ ಕಾರ್ಯ ನಿರ್ವಾಹಕ ಇಂಜಿನೀಯರ್, ಹೈದ್ರಬಾದ್ ಕರ್ನಾಟಕ ಅಭಿವೃದ್ಧಿ ಕಾಮಗಾರಿ ಉಪವಿಭಾಗ, ಯಾದಗಿರಿ.

ಆ) ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಕಾಮಗಾರಿಗಳನ್ನು ವಿಶೇಷ ಯೋಜನೆ ಆಡಿ ತೆಗೆದುಕೊಂಡಿದ್ದು ಒಂದು ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕಾಗಿರುವುದರಿಂದ ವಿಶೇಷವಾಗಿ 3 ಉಪವಿಭಾಗಗಳನ್ನು ತೆರೆಯಲಾಗಿದೆ. ಆದ್ದರಿಂದ ಇವುಗಳನ್ನು ಸ್ಥಳಾಂತರಿಸುವ ಪ್ರಶ್ನೆ ಇರುವುದಿಲ್ಲ.

ಇ) ಎರಡೂ ಒಂದೇ ತಾಲ್ಲೂಕಿನಲ್ಲಿ ಇದ್ದರೂ ಕೂಡ ಅವುಗಳ ಭೌಗೋಳಿಕ ಕಾರ್ಯವ್ಯಾ[illegible] ಬರುವ ತಾಲ್ಲೂಕುಗಳಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಲಿವೆ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಸರ್ಕಾರಿ ಕಟ್ಟಡಗಳ ನಿರ್ಮಾಣದಲ್ಲಿ ವಿಳಂಬ

1199 (1578): ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್):–

ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ !

ಅ) ಎಷ್ಟು ಸರ್ಕಾರಿ ಕಟ್ಟಡಗಳು ಬಹಳ ಕಾಲದಿಂದ ಪೂರ್ಣಗೊಂಡಿಲ್ಲ ಅಥವಾ [illegible]ರ್ಮಾಣ ಹಂತದಲ್ಲಿ ಇವೆ;

ಆ) ಹಾಗಿದ್ದಲ್ಲಿ ಈ ಕಟ್ಟಡಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು;

ಇ) ಈ ವಿಳಂಬದಿಂದಾಗಿ ಆಗಬಹುದಾದ ಹೆಚ್ಚುವರಿ ಹಣವೆಷ್ಟು ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಉತ್ತರವಲಯದಲ್ಲಿ – 4

ದಕ್ಷಿಣ ವಲಯದಲ್ಲಿ – 31
ಈವರೆಗೆ ಒಟ್ಟು – 35

ಅ) 27 ಕೆಲಸಗಳನ್ನು 95-96ನೇ ಸಾಲಿನೊಳಗೆ, ಉಳಿದ 8 ಕೆಲಸಗಳನ್ನು ಅನುದಾನದ ಲಭ್ಯತೆಯನ್ನಾಧರಿಸಿ ಮತ್ತು ನ್ಯಾಯಾಲಯದ ತೆರವನ್ನಾಧರಿಸಿ ಪೂರ್ಣಗೊಳಿಸಲಾಗುವುದು.

ಇ) ಈ ಹಂತದಲ್ಲಿ ಅದನ್ನು ನಿಗದಿಪಡಿಸಲು ಬರುವುದಿಲ್ಲ.

ಉಳ್ಳಾಲ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡ ರಸ್ತೆಗಳು

1200 (2017): ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):–

ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲಾಪರಿಷತ್ತಿನಿಂದ ಲೋಕೋಪಯೋಗಿ ಇಲಾಖೆಗೆ ಉಳ್ಳಾಲ ಕ್ಷೇತ್ರದಲ್ಲಿ ತೆಗೆದುಕೊಂಡ ರಸ್ತೆಗಳು ಎಷ್ಟು ಕಿಲೋ ಮೀಟರ್; (ಅವುಗಳ ಹೆಸರನ್ನು ತಿಳಿಸುವುದು);

ಆ) ಈ ರಸ್ತೆಗಳು ಭಾರೀ ನಾದುರಸ್ತಿಯಲ್ಲಿರುವುದರಿಂದ ಇವುಗಳ ಡಾಂಬರೀಕರಣ ಯಾವಾಗ ಆರಂಭಿಸಲಾಗುವುದು;

ಇ) ಇದಕ್ಕೆ ಬೇಕಾಗುವ ಹಣದ ಬಿಡುಗಡೆ ಮಾಡಲಾಗಿದೆಯೇ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) 47-50 ಕಿ.ಮೀ. ರಸ್ತೆಗಳ ಹೆಸರು ಕೆಳಕಂಡಂತಿದೆ:–

1.	ಪೆರವನ್ನೂರು, – ಪಾವೂರು ರಸ್ತೆ	9.00 ಕಿ.ಮೀ
2.	ನಾಟ್‌ಕಲ್ – ಮಂಜನಾಡಿ ರಸ್ತೆ	4.50 ಕಿ.ಮೀ
3.	ಪಜೀರ್ – ಅದ್ಯಾರ್ ರಸ್ತೆ	6.00 ಕಿ.ಮೀ.
4.	ಉಚ್ಚಿಲ – ದೇರಲಕಟ್ಟೆ ರಸ್ತೆ	6.20 ಕಿ.ಮೀ.
5.	ಉಳ್ಳಾಲ ಕೋಟೆಯಿಂದ ಉಳ್ಳಾಲ ರೈಲ್ವೆ ಸ್ಟೇಷನ್	2.40 ಕಿ.ಮೀ.
6.	ದೇರಳಕಟ್ಟೆ ಬರುವ ರಸ್ತೆ	3.00 ಕಿ.ಮೀ.
7.	ಫಬೀರ್ (ಪಾವೂರು) ಇನ್ನೋಳಿ ರಸ್ತೆ	5.80 ಕಿ.ಮೀ.
8.	ಉಚ್ಚಿಲ ಕಡವಿನಿಂದ ಉಳ್ಳಾಲ ರೈಲ್ವೆ ಸ್ಟೇಷನ್	2.60 ಕಿ.ಮೀ.
9.	ಪಡೀಲ ಬಜಾರ ಜಪ್ಪಿನ ಮೊಗರು ರಸ್ತೆ	5.00 ಕಿ.ಮೀ.
10.	ಬಂತೂರು ಪೈಜಲ್ ನಗರ ಕಂಕನಾಡಿ ರೈಲ್ವೆ ಸ್ಟೇಷನ್ ರಸ್ತೆ	3.00 ಕಿ.ಮೀ.
		47.50 ಕಿ.ಮೀ.

ಆ) ಮೇಲ್ದರ್ಜೆಗೇರಿಸಿದ ರಸ್ತೆಗಳ ಅಭಿವೃದ್ಧಿಯನ್ನು ಹಂತಹಂತವಾಗಿ 1993-94ರ ಸಾಲಿನಿಂದ ತೆಗೆದುಕೊಳ್ಳಲಾಗುವುದು.

ಇ) 1992-93ನೇ ಸಾಲಿನಲ್ಲಿ ಈ ರಸ್ತೆಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆ ಆಗಿರುವುದಿಲ್ಲ.

ಟಿ. ನರಸೀಪುರ ಕ್ಷೇತ್ರದಲ್ಲಿ ರಸ್ತೆ ರಿಪೇರಿ

1202 (1579): ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):–